# ಶಿವಶರಣ ದೇವರ ದಾಸಿಮಯ್ಯ


**ಕಥೆ : ಟಿ.ಎಂ.ಎಸ್** **ಚಿತ್ರ: ಶಂಕರ್**

**1** 11ನೇ ಶತಮಾನದಲ್ಲಿ ಯಾದಗಿರಿ ಜಿಲ್ಲೆಯ ಮುದನೂರಿನಲ್ಲಿ ಜೀವಿಸಿದ್ದ ಶಿವಶರಣ ಸಂತನೇ ದೇವರ ದಾಸಿಮಯ್ಯ. ನೇಕಾರ ವೃತ್ತಿಯನ್ನು ಮಾಡುತ್ತಿದ್ದ ಅವನು ದೊಡ್ಡ ಶಿವಭಕ್ತನಾಗಿದ್ದ. ಮುಂದೆ ಅವನು ಅನೇಕ ಸಮಾಜ ಸುಧಾರಣೆಯ ಕಾರ್ಯಗಳನ್ನು ಮಾಡಿದ. ಒಂದು ದಿನ ಅವನು ತನ್ನ ಪತ್ನಿ ದುಗ್ಗಳೆಯೊಂದಿಗೆ ಇದ್ದಾಗ..




ದಾಸಿಮಯ್ಯನು ಆ ದಾರದಿಂದ ಶಿವನ ದಿವ್ಯಕಥೆ ಹಾಗೂ ಶಿವಭಕ್ತರ ಚರಿತೆಗಳನ್ನು ಚಿತ್ರಿಸುವ ಸುಂದರವಾದ ವಸ್ತ್ರವನ್ನು ನೇಯ್ದನು.






ಬಸವಳಿದು ಕುಳಿತುಬಿಟ್ಟಿದ್ದ ದಾಸಿಮಯ್ಯನ ಬಳಿಗೆ ಜಂಗಮನೊಬ್ಬ ಬಂದ.



5 ಆ ಜಂಗಮನ ಸ್ವಭಾವದಿಂದ ಆಕರ್ಷಿತನಾದ ದಾಸಿಮಯ್ಯ ಒಂದು ಕ್ಷಣ ಯೋಚಿಸಿ ಹೇಳಿದ..





6 ಆ ಶಿವಭಕ್ತನು ಬಟ್ಟೆಯನ್ನು ಸ್ವೀಕರಿಸಿ, ಅದನ್ನು ಹಲವು ಚೂರುಗಳನ್ನಾಗಿ ಮಾಡಿ, ಕೆಲವನ್ನು ತನ್ನ ಜಡೆಗೆ ಸುತ್ತಿಕೊಂಡ, ಇನ್ನು ಕೆಲವನ್ನು ತನ್ನ ಯೋಗದಂಡಕ್ಕೆ, ಇನ್ನು ಕೆಲವನ್ನು ಕಮಂಡಲುವಿಗೆ ಸುತ್ತಿಕೊಂಡ. ಆಗ..





ದಾಸಿಮಯ್ಯ ಈ ಕಥೆಯನ್ನೆಲ್ಲ ತನ್ನ ಪತ್ನಿಗೆ ತಿಳಿಸಿದ. ಆಕೆ ಅವನು ತಂದ ಧಾನ್ಯ ಇತ್ಯಾದಿಗಳನ್ನು ಮನೆಯಲ್ಲಿದ್ದ ಹಲವು ಮಡಕೆಗಳಲ್ಲಿ ತುಂಬಿ ಇಟ್ಟಳು.

7 ಮರುದಿನ.. ಶಿವಭಕ್ತ ಕೊಟ್ಟಿದ್ದ ಧಾನ್ಯ ಪಾತ್ರೆಗಳನ್ನೆಲ್ಲ ತುಂಬಿಕೊಂಡಿದ್ದವು! ತೆಗೆದಷ್ಟು ಅವು ಮತ್ತೆ ತುಂಬುತ್ತಿದ್ದವು.




8 ದಾಸಿಮಯ್ಯನು ಶಿವನ ಮಹಿಮೆಯನ್ನು ಎಲ್ಲೆಡೆ ಸಾರತೊಡಗಿದ. ಇತರ ಮತಗಳಿಗೆ ಸೇರಿದ ಕೆಲವರಿಗೆ ಇದನ್ನು ಸಹಿಸಲಾಗದೆ, ಅವನನ್ನು ಪರೀಕ್ಷಿಸಲು ಹೊರಟರು. ಒಂದು ಮಡಕೆಯೊಳಗೆ ವಿಷಪೂರಿತ ಹಾವನ್ನು ಇಟ್ಟು, ಅದಕ್ಕೆ ಬಟ್ಟೆಯನ್ನು ಕಟ್ಟಿ ಅವನ ಬಳಿಗೆ ತಂದರು.





ದಾಸಿಮಯ್ಯನು ಆ ಮಡಕೆಯೊಳಗಿನಿಂದ ಸ್ಫಟಿಕಲಿಂಗವನ್ನು ಹೊರತೆಗೆದು ಎಲ್ಲರಿಗೂ ಅಚ್ಚರಿಯನ್ನುಂಟುಮಾಡಿದ. ಹಾವನ್ನು ನಿರೀಕ್ಷಿಸಿದ್ದ ಎಲ್ಲರೂ ಲಿಂಗವನ್ನು ನೋಡಿ, ಶಿವನ ಮಹಿಮೆಗೆ ಬೆರಗಾದರು.

9

ದಾಸಿಮಯ್ಯನೇನೋ ದೊಡ್ಡ ಶಿವಭಕ್ತನಾಗಿದ್ದ; ಆದರೆ ದಿನ ಕಳೆದಂತೆ ಅವನಲ್ಲಿ ಜಂಬ ಬೆಳೆಯಿತು. ''ಶಿವನಂತೆ ನೀಡುವವರಿಲ್ಲ; ನನ್ನಂತೆ ಅವನಿಂದ ಪಡೆಯುವವರಿಲ್ಲ'' ಎಂದು ಅವನು ಭಾವಿಸಿದ.

ಅವನಿಗೆ ಸರಿಯಾಗಿ ಬುದ್ಧಿ ಕಲಿಸಬೇಕೆಂದು ತೀರ್ಮಾನಿಸಿದ ಶಿವ. ಬಿಜಾಪುರ ಜಿಲ್ಲೆಯ ಸ್ಕಂಧಶಿಲೆ ಎಂಬ ಊರಿನಲ್ಲಿ ಶಂಕರ ದಾಸಿಮಯ್ಯನೆಂಬ ದೊಡ್ಡ ಶಿವಶರಣನಿದ್ದ. ಅವನ ಕನಸಿನಲ್ಲಿ ಶಿವ ಕಾಣಿಸಿಕೊಂಡ.





ಅಂತೆಯೇ ಶಂಕರ ದಾಸಿಮಯ್ಯನು ತನ್ನ ಮಡದಿ ಹಾಗೂ ಶಿಷ್ಯಂದಿರೊಡನೆ ಎಲ್ಲ ಪುಣ್ಯಕ್ಷೇತ್ರಗಳನ್ನೂ ಸಂದರ್ಶಿಸಿದ. ಅನಂತರ ಅವನು ದೇವರ ದಾಸಿಮಯ್ಯನ ಊರಾದ ಮುದನೂರಿಗೆ ಬಂದ. ಅಲ್ಲಿನ ದೇವಾಲಯದಲ್ಲಿ ಅವನು ಪ್ರವಚನ ನೀಡಿದ. ದಾಸಿಮಯ್ಯನೂ ಅವನ ಪ್ರವಚನ ಕೇಳಲು ಪತ್ನಿಯೊಂದಿಗೆ ಬಂದಿದ್ದ.


11


ಶಿವನ ಇಚ್ಛೆಯಂತೆ ದಾಸಿಮಯ್ಯನ ಜಂಬ ಪುಡಿಪುಡಿಯಾಗುವ ಸಮಯ ಹತ್ತಿರವಾಯಿತು. ಅವನು ಶಂಕರ ದಾಸಿಮಯ್ಯನ ಭಕ್ತಿಯನ್ನು ನೋಡಿ ತುಂಬಾ ಪ್ರಭಾವಿತನಾದ. ಮರುದಿನ ಅವನು ಶಂಕರ ದಾಸಿಮಯ್ಯನ ಬಳಿಗೆ ಹೋದ. ಆಗ ಶಂಕರ ದಾಸಿಮಯ್ಯನ ಪತ್ನಿ ಶಿಷ್ಯನೊಬ್ಬನಿಗೆ ಹೇಳಿದಳು..







**13** 'ದೇವರ ಅನುಗ್ರಹಕ್ಕೆ ಪಾತ್ರನಾದವನಿಗೆ ಜಂಬವಿರುವುದು ಯೋಗ್ಯವೇ? ಅವನು ಒಳ್ಳೆಯ ದಾರಿಗೆ ಬರುವಂತಾಗಬೇಕು' ಎಂದು ಯೋಚಿಸುತ್ತ ಶಂಕರ ದಾಸಿಮಯ್ಯನು ಒಂದಿಷ್ಟು ಕಸವನ್ನು ಆಕಾಶಕ್ಕೆ ಎಸೆದ. ಅದೆಲ್ಲವೂ ಬಂಗಾರವಾಗಿ ಮಾರ್ಪಟ್ಟಿತು!





**15** ಏನು ಮಾಡಿದರೂ ಶಂಕರ ದಾಸಿಮಯ್ಯನು ಅವನ ಪ್ರಾರ್ಥನೆಗೆ ಕರಗಲಿಲ್ಲ. ದೇವರ ದಾಸಿಮಯ್ಯ ಬೇಸರದಿಂದ ಮನೆಗೆ ಮರಳಿದ..




**16** ಅವರಿಬ್ಬರೂ ಶಂಕರ ದಾಸಿಮಯ್ಯನ ಬಳಿಗೆ ಹೋಗಿ, ಮತ್ತೊಮ್ಮೆ ಅವನ ಬಳಿ ಕ್ಷಮೆ ಕೋರಿದರು. ದಾಸಿಮಯ್ಯನು ತನ್ನಲ್ಲಿದ್ದ ತಪ್ಪನ್ನು ಅರಿತುಕೊಂಡದ್ದರಿಂದ ಅವನ ಜಂಭವೆಲ್ಲ ಹೊರಟುಹೋಯಿತು ಎಂಬುದನ್ನರಿತ ಶಂಕರ ದಾಸಿಮಯ್ಯ ಅವನನ್ನು ಕ್ಷಮಿಸಿದ.




''ದೇವರೇ ಎಲ್ಲವನ್ನೂ ಮಾಡುವನು, ನಿಜ. ಆದರೆ ಅದು ಯಾವಾಗಲೂ ಅರಿವಿಗೆ ಬರುವುದೆ? ಅಹಂಕಾರದಿಂದ ಕಣ್ಣು ಕಾಣದ ಜನರು ತಾವೇ



ಎಲ್ಲವನ್ನೂ ಮಾಡುತ್ತಿರುವುದಾಗಿ ತಿಳಿಯುತ್ತಾರೆ. ಅವರು ದೇವರಲ್ಲಿ ಶರಣಾಗುವುದಿಲ್ಲ. ಯಾರು ಭಗವಂತನನ್ನೇ ಆಶ್ರಯಿಸುವರೋ, ಅವರನ್ನು ಅವನು ರಕ್ಷಿಸುವನು.''

–ಶ್ರೀಮಾತೆ ಶಾರದಾದೇವಿ